ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ೩೧-೩-೧೯೮೫ರ ವೇಳೆಗೆ ೭೬ ೯೩ ಕೋಟಿ ರೂ.ಗಳು,

ಆ) ೧೯೮೩-೮೪ ೧೫.೭೪ ಕೋಟಿ ರೂ.ಗಳು. ೧೯೮೪-೮೫ ೨೨.೪೮ ಕೋಟಿ ರೂ.ಗಳು, ೧೯೮೫-೮೬ ೧೧.೮೫ ಕೋಟಿ ರೂ.ಗಳು (೩೧-೧೨-೧೯೮೬ರವರೆಗೆ)

ಇ) ೧) ವಾಹನಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯವನ್ನು ಹೆಚ್ಚು ಸುಧಾರಿಸುವ ಮೂಲಕ.

೨) ಸಾಧ್ಯವಾದಷ್ಟು ಮಟ್ಟಿಗೆ ವಾಹನ ಸಿಬ್ಬಂದಿ ಪ್ರಮಾಣವನ್ನು ಕಡಿಮೆಮಾಡಿ ಸಿಬ್ಬಂದಿ ಹಾಗೂ ವಾಹನಗಳ ಉಪಯುಕ್ತತೆಯನ್ನು ಹೆಚ್ಚಿಸುವುದರ ಮೂಲಕ.

೩) ಟೈರುಗಳು ಇಂಧನ, ಬಿಡಿ ಭಾಗಗಳ ವೆಚ್ಚವನ್ನು ನಿಯಮಿತ ಪ್ರಮಾಣದಲ್ಲಿ ಉಪಯೋಗಿಸಿ ತನ್ಮೂಲಕ ವೆಚ್ಚವನ್ನು ಕಡಿಮೆ ಮಾಡುವುದು.

೪) ಇಂಧನ ಬಳಕೆಯ ಪ್ರಮಾಣ ಉತ್ತಮಪಡಿಸುವುದು.

೫) ಪ್ರೋತ್ಸಾಹ ಧನ ನೀಡುವುದರ ಮೂಲಕ ಆದಾಯವನ್ನು ಹೆಚ್ಚಿಸುವುದು.

೬) ವಾಹನಗಳ ತನಿಖೆ ಹೆಚ್ಚಿಸುವುದು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಖರೀದಿಸಿರುವ ಟೈರು ಮತ್ತು ಟ್ಯೂಬ್‌ಗಳ ಬಗ್ಗೆ

೧೯೪೧. ಶ್ರೀ ಬಿ. ಎ. ಉಪಾರಬ್ಬಿ (ವಿಟ್ಲ).— ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಪ್ರತಿ ಒಂದು ವರ್ಷಕ್ಕೆ ಟೈರು ಮತ್ತು ಟ್ಯೂಬ್‌ಗಳಿಗಾಗಿ ಬೇಕಾಗುವ ಹಣ ಎಷ್ಟು ?

ಆ) ಈಗ ಟೈರು ಟ್ಯೂಬ್‌ಗಳನ್ನು ಯಾವ ವಿಧದಲ್ಲಿ ಖರೀದಿ ಮಾಡಲಾಗುತ್ತಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೮೫-೮೬ನೇ ಸಾಲಿನಲ್ಲಿ ಹೊಸ ಟೈರು ಮತ್ತು ಟ್ಯೂಬುಗಳನ್ನು ಕೊಳ್ಳಲು ೧೮.೮೧ ಕೋಟಿ ರೂ.ಗಳನ್ನು ಖರ್ಚು ಮಾಡಿದೆ.

ಆ) ತ್ರೈಮಾಸಿಕ ಟೆಂಡರ್ ಆಧಾರದ ಮೇಲೆ ಟೈರು, ಟ್ಯೂಬು ಮತ್ತು ಫ್ಲಾಪ್‌ಗಳನ್ನು ತಯಾರಕರಿಂದ ಖರೀದಿಸಲಾಗುತ್ತಿದೆ.

ಹರಿಜನ ಸೇವಾ ಸಂಘಕ್ಕೆ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ

೧೪೭೬. ಶ್ರೀ ಸಿ. ಕಣ್ಣನ್ (ಭಾರತೀನಗರ).—ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಕ್ಕಿತಿಮ್ಮನಹಳ್ಳಿಯ ಸರ್ವೆ ನಂ. ೭೧/೧ ೭೨/೧ ೪೨/೨ ಮತ್ತು ೪೩/೧ರಲ್ಲಿ ೧೪೯ ನಿವೇಶನಗಳನ್ನು ಮಾಡಿ ಹರಿಜನ ಸೇವಾ ಸಂಘದ ಮೂಲಕ ಗುಡಿಸಲು ನಿವಾಸಿಗಳಿಗೆ ಹಂಚಲು ಬಡಾವಣೆಯನ್ನು ಯೋಜಿಸಿದ್ದು ನಿಜವಷ್ಟೆ?

ಆ) ಸರ್ವೆ ನಂ. ೭೨/೧, ೪೨/೨ ಮತ್ತು ೪೩/೧ರಲ್ಲಿ ಕೋರ್ಟಿನ ತಡೆಯಾಜ್ಞೆಯಿದ್ದುದರಿಂದ ಪ್ರಾಧಿಕಾರದ ನಿರ್ಣಯದ ಸಂಖ್ಯೆ ೪೨೫ ದಿನಾ ೧೬-೧೨-೮೫ರ ಪ್ರಕಾರ ಕೇವಲ ೩೮ ನಿವೇಶನಗಳನ್ನು ಹಂಚಲಾಗಿರುವುದು ಸಹ ನಿಜವಷ್ಟೆ ?

ಇ) ಸರ್ವೆ ನಂ. ೪೨/೨ ಮತ್ತು ೪೩/೧ಕ್ಕೆ ೧೯೮೪ರಲ್ಲೂ ಮತ್ತು ಸರ್ವೆ ನಂ. ೭೨/೧ಕ್ಕೆ ಮೇ, ೧೯೮೫ರಲ್ಲೂ ಕೋರ್ಟಿನ ತಡೆಯಾಜ್ಞೆಯೂ ತೆರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ ಉಳಿದ ೧೫೦ ನಿವೇಶನಗಳನ್ನು ಸಂಘಕ್ಕೆ ಬಿಡುಗಡೆ ಮಾಡಲು ವಿಳಂಬವಾಗಲು ಕಾರಣಗಳೇನು ?

ಉ) ಸರ್ವೆ ಸಂಖ್ಯೆ ೪೨/೨ ಮತ್ತು ೪೩/೧ರಲ್ಲಿ ಅನಧಿಕೃತ ನಿರ್ಮಾಣಗಳಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಒಬ್ಬ ನಗರಸಭಾ ಸದಸ್ಯರು ಈ ಜಾಗವನ್ನು ಹಳೆಯ ಮಾಲೀಕರಿಗೆ ಉಳಿಸಿಕೊಡಲು ಉತ್ಸುಕರಾಗಿದ್ದಾರೆಂಬ ವಿಷಯವು ತಿಳಿದು ಬಂದಿದೆಯೇ ?